**ದಿ: 24-10-2024ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು ಶ್ರೀ ಬಿ ಎಮ್ ಎಂ ವಕೀಲರಿಂದ :**

ನಾನು ನೀಡಿದ ಚೆಕ್ ಪ್ರತಿವಾದಿಯ ಯಾವ ಬ್ಯಾಂಕ್ ಖಾತೆಯಲ್ಲಿ ಹಣ ಜಮಾಗೊಂಡಿದೆ ಗೊತ್ತಿಲ್ಲ. ನನ್ನ ಬ್ಯಾಂಕ್ ನ ಅಕೌಂಟ್ ಸ್ಟೇಟ್‌ಮೆಂಟ್ ನಲ್ಲಿ ಕಂಡುಬರುತ್ತದೆ. ನಾನು ವಾದಪತ್ರದ ಪುಟ ಸಂಖ್ಯೆ 2ರಲ್ಲಿ ಪ್ರಸ್ತಾಪಿಸಿರುವ ಎರಡು ಚೆಕ್‌ಗಳು ಸಿಂದೂರ್ ಬಾರ್ ನ ಚಾಲ್ತಿ ನಿಪಿ-4 ಖಾತೆಗೆ ಸಂಬಂಧಿಸಿದವು ಎಂದರೆ ಸರಿ. ಸದ್ರಿ ಖಾತೆಗೆ ಓಡಿ ಸೌಲಭ್ಯ ಇದೆ. ಸದ್ರಿ ನಿಪಿ-4ರಲ್ಲಿ ಕಂಡ ರೂ. 5ಲಕ್ಷ ದಿಃ 23-09-2016 ಓಡಿ ಸೌಲಭ್ಯದಿಂದ ಬಂದಿದೆ ಎಂದರೆ ನೆನಪಿಲ್ಲ.ಸದ್ರಿ ನಿಪಿ-4ರ ವಿವರಗಳ ಪ್ರಕಾರ 23-09-2016 ರಂದು ಹಿಂಪಡೆದ ಹಣ Counter Withdrawal ಎಂದರೆ ಸರಿ. ಪುನಃ ದಿಃ 26-09-2016 ರಂದು ರೂ.5 ಲಕ್ಷ ಹಣವನ್ನು ನಗದು ರೂಪದಲ್ಲಿ ಜಮಾ ಮಾಡಲಾಗಿದೆ ಎಂದರೆ ಸರಿ.

ದಿಃ 23-09-2016 ರಂದು Counter Withdrawal ಆದ ಚೆಕ್ಕನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ದಿಃ 26-08-2020 ಪ್ರತಿವಾದಿಗೆ ಕಳುಹಿಸಿದ ನೋಟೀಸಿನ ಜೊತೆ ದಿಃ 16-09-2016, 092059ರ ಚೆಕ್ ನ ನಕಲು ಪ್ರತಿ ಕಳುಹಿಸಿದ್ದೆನು ಎಂದರೆ ಸರಿ. ಸದ್ರಿ ಚೆಕ್ಕ ನಲ್ಲಿರುವ ಬರವಣಿಗೆ ನನ್ನದೆ. ಸದ್ರಿ ಚೆಕ್ಕು ಸ್ವಲ್ಪ ಬರವಣಿಗೆ ತಪ್ಪಿ ರುವ (clerical error) ಕಾರಣ ಹಣ ಸಂದಾಯವಾಗಿರುವುದಿಲ್ಲ ಎಂದು ಬ್ಯಾಂಕ್ ನವರು ತಿಳಿಸಿರುತ್ತಾರೆ. ಸದ್ರಿ ಚೆಕ್ಕ ನ ಹಣ ಸಂದಾಯವಾದ ಬಗ್ಗೆ ನನ್ನ ಖಾತೆಯಲ್ಲಿ ನಮೂದಿಸಿರುವ ಬಗ್ಗೆ ಗೊತ್ತಿಲ್ಲ.

ಬದಲಿ ಚೆಕ್ಕು ನಂ. 092061 ನ್ನು 16-09-2016ರಂದು ಕೊಟ್ಟಿರುತ್ತೇನೆ. ಸದಿರ ಚೆಕ್ಕಿನ ಬಗ್ಗೆ ನಾನು ಪ್ರತಿವಾದಿಗೆ ಕಳುಹಿಸಿ ಎರಡು ನೋಟೀಸಿನಲ್ಲಿ ಉಲ್ಲೇಖಿಸಿಲ್ಲ ಎಂದರೆ ಸಾಕ್ಷಿ ಸರಿ ಆದರೆ ನನ್ನ ವಕೀಲರಿಗೆ ಹೇಳಿದ್ದೆನು. ಕರಾರು ಪತ್ರದ ಕಾಗದವನ್ನು ಉದಯ ಕುಮಾರ್ ಶೆಟ್ಟಿ , ವಕೀಲರ ಕಚೇರಿಯಲ್ಲಿ ತಂದಿರುತ್ತೇನೆ. 25-05-2016ರಂದು 12.30 ಗಂಟೆಗೆ ತಯಾರಿಸಲಾಗಿದೆ. ನಾನು ಮತ್ತು ಪ್ರತಿವಾದಿ ಹಾಜರಿದ್ದೆವು. ದಾವಾ ಸ್ವತ್ತಿನ ಬಗ್ಗೆ ಕರಾರಾಗುವ ಪೂರ್ವದಲ್ಲಿ ಕಾನೂನು ಅಭಿಪ್ರಾಯ ತೆಗೆದುಕೊಳ್ಳಲಾಗಿದೆ. ಹಾಗಾಗಿ ಜಂಟಿ ಆಸ್ತಿಯನ್ನು ಪ್ರತಿವಾದಿ ಒಬ್ಬರೇ ವಿಕ್ರಯ ಮಾಡಲು ಸಾಧ್ಯವಾಗುವುದಿಲ್ಲ ಎಂದು ತಿಳಿದಿತ್ತು ಎಂದರೆ ಸರಿಯಲ್ಲ.

ನಿಪಿ-2ರ ಕರಾರು ಪತ್ರದಲ್ಲಿನ ಗಡಿಗಳು ನಿಪಿ-1ರ ಎ ಶೆಡ್ಯೂಲ್ ಸ್ವತ್ತಿನ ಐಟಂ ನಂ. 1ರ ಗಡಿಗಳಾಗಿರುತ್ತವೆ ಎಂದರೆ ಸರಿ. ನಾನು ಮತ್ತು ಪ್ರತಿವಾದಿ ನೋಟರಿ ಕಚೇರಿಯಲ್ಲಿದ್ದ ವಹಿಗೆ ಸಹಿ ಹಾಕಿರುತ್ತೇವೆ. ಪ್ರತಿವಾದಿ ಇಬ್ಬರು ಮಕ್ಕಳಿಂದ ಬಾಯಿ ಮಾತಿನ ಮೂಲಕ ಪಾಲಾದ ಬಗ್ಗೆ ಬರವಣಿಗೆ ಮುಖಾಂತರ ಖಾತರಿಪಡಿಸಿಕೊಂಡಿಲ್ಲ. ಪ್ರತಿವಾದಿ ಮಕ್ಕಳ ಸಹಿ ಅವಶ್ಯಕತೆ ಇಲ್ಲದ ಕಾರಣ ಅವರ ಸಹಿ ಪಡೆದಿಲ್ಲ. ಸುಧಾಕರ್ ಬಿ ರವರು ಪ್ರತಿವಾದಿ ಕಡೆಯಿಂದ ಮತ್ತು ಪ್ರತಾಪ್ ಶೆಟ್ಟಿ ರವರು ನನ್ನ ಕಡೆಯಿಂದ ಬಂದ ಸಾಕ್ಷಿದಾರರಾಗಿರುತ್ತಾರೆ. ನಾನು ಕುಂದಾಪುರ ನ್ಯಾಯಾಲಯದಲ್ಲಿ ಪಿಸಿಆರ್ 21/23 ಮತ್ತು 38/2023 ರಂತೆ ಈಗ ನನಗೆ ತೋರಿಸಿದ ದೃಡೀಕೃತ ದಾಖಲೆಗಳ ಪ್ರಕಾರ ಸಲ್ಲಿಸಿದ್ದೆ ಎಂದರೆ ಸರಿ. ಅದನ್ನು ನಿಡಿ-1 ಮತ್ತು 2 ಎಂದು ಹಾಗೂ ಅದರ ಮೇಲೆ ಪೋಲೀಸರು ದಾಖಲಿಸಿದ ಮೊಕದ್ದಮೆ ಸಂಖ್ಯೆ 67/2023 ರಲ್ಲಿ ಸಲ್ಲಿಸಿದ ಅಂತಿಮ ಬಿ ವರದಿ ಮತ್ತು ಪ್ರ.ವ.ವರದಿಯನ್ನು ನಿಡಿ- 3 ಮತ್ತು 4 ಎಂದು ಗುರುತಿಸಲಾಯಿತು.

ನಿಪಿ-2ರಲ್ಲಿ ನೊಂದಣಿ ಕ್ರಯ ಬರೆದು ಕೊಡಲು 5 ವರ್ಷಗಳ ಅವಧಿ ನಿಗಧಿಪಡಿಸಿದೆ ಎಂದರೆ ಸರಿ. ಸದ್ರಿ ಅವಧಿಯನ್ನು ನಾನು ಇದ್ದ ಫ್ಲಾಟ್ ನಲ್ಲೇ ಪ್ರತಿವಾದಿ ಇದ್ದ ಕಾರಣ ನಿಗಧಿಪಡಿಸಲಾಯಿತು. ಸದ್ರಿ ನಿಪಿ-2ರಲ್ಲಿ ದಿಃ 23-09-2016 ರಂದು ನೀಡಿದ ಚೆಕ್ಕು ನಗದೀಕರಣಗೊಂಡ ದಿನದಿಂದ 5 ವರ್ಷದ ಅವಧಿ ಎಂದು ಒಪ್ಪಿದ್ದೆವು ಎಂದರೆ ಸರಿ.

ಲಕ್ಷ್ಮಣ ಶೆಟ್ಟಿ ವಕೀಲರು ನಮ್ಮ ಪರಿಚಯದವರು ಎಂದರೆ ಸರಿ. ಸದ್ರಿ ಲಕ್ಷ್ಮಣ ಶೆಟ್ಟಿ ವಕೀಲರು ದಿಃ 20-03-2017 ನಾನು ಬರೆದುಕೊಟ್ಟ ವ್ಯವಸ್ಥಾ ಪತ್ರ ಹಾಗೂ ದಿಃ 04-07-2020 ರಂದು ಬರೆದುಕೊಟ್ಟ ವಿಲ್ ದಾಖಲೆಗೆ, ದಿಃ -17-06-2020 ರಂದು ಬರೆದುಕೊಟ್ಟ ವಿಲ್ ದಾಖಲೆಗೆ ಮತ್ತು ದಿಃ 14-07-2016ರ ವಿಲ್ ದಾಖಲೆಗಳಿಗೆ ಸಾಕ್ಷಿಯಾಗಿ ಮತ್ತು ದಸ್ತಾವೇಜು ಬರಹಗಾರರಾಗಿ ಸಹಿ ಹಾಕಿರುತ್ತಾರೆ ಎಂದರೆ ಸರಿ. ಚೈತ್ರ, ಶಿಲ್ಪ ಮತ್ತು ಸುಶ್ಮಿತ ಮಾಡಿಕೊಟ್ಟ ಪ್ರಮಾಣ ಪತ್ರದಲ್ಲೂ ಸಹ ಸದ್ರಿ ಲಕ್ಷ್ಮಣ ಶೆಟ್ಟಿ ವಕೀಲರು ಗುರುತಿನ ಸಾಕ್ಷಿಯಾಗಿ ಸಹಿ ಹಾಕಿರುತ್ತಾರೆ. ಸದ್ರಿ ಮೂರು ಜನ ಮಾಡಿಕೊಟ್ಟ ಪ್ರಮಾಣ ಪತ್ರ ಒಂದೇ ತಾರೀಕಿನದ್ದಾಗಿರುತ್ತದೆ.

ಪ್ರಸ್ತುತ ದಾವಾ ಸ್ವತ್ತಿನ ಬೆಲೆ ಎಷ್ಟಿದೆ ಎಂದು ಗೊತ್ತಿಲ್ಲ. 2015-16ರ ಸಾಲಿನಲ್ಲಿ 5-6 ಲಕ್ಷ ಪ್ರತಿ ಸೆಂಟ್ಸ್ ಇತ್ತು ಎಂದರೆ ಸಾಕ್ಷಿ ಈಗಲೂ ಇಲ್ಲ ಎಂದು ನುಡಿಯುತ್ತಾರೆ. ವಾದ ಪತ್ರದಲ್ಲಿ ಕಂಡ ಚೆಕ್ಕನು ವಾದಿಯಾದ ನಾನೇ ಪ್ರತಿವಾದಿಯ ಹೆಸರನ್ನು ಕಾಣಿಸಿ ನಾನೇ ಹಣ ಹಿಂಪಡೆದು 3 ದಿನದಲ್ಲಿ ಪುನಃ ನನ್ನ ಖಾತೆಗೆ ಹಣ ಜಮಾಯಿಸಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ 3 ದಿನದ ನಂತರ ನನ್ನ ಖಾತೆಗೆ ಜಮಾಯಿಸಿದ 5ಲಕ್ಷ ಹಣ ನನ್ನ ಬಾರ್ ಆಂಡ್ ರೆಸ್ಟೋರೆಂಟ್ ನಿಂದ ಬಂದ ಹಣವಾಗಿದೆ. ಸದ್ರಿ 5ಲಕ್ಷ ಹಣ ಬಾರ್ ಆಂಡ್ ರೆಸ್ಟೋರೆಂಟ್ ನಿರ್ವಹಿಸಿದ ಕ್ಯಾಶ್ ವಹಿಯಲ್ಲಿ ನಮೂದು ಇದೆ. ಅದನ್ನು ತಂದು ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ವತಿಯಿಂದ ಪ್ರತಿವಾದಿಗೆ ಯಾವುದೇ ಮುಂಗಡ ಹಣ ರೂ.5 ಲಕ್ಷ ಪಾವತಿಯಾಗಿಲ್ಲ ಮತ್ತು ಪ್ರತಿವಾದಿ ದಾವಾ ಸ್ವತ್ತನು ಮಾರಾಟ ಮಾಡಿಕೊಡುತ್ತೇವೆ ಎಂದು ಕರಾರು ಮಾಡಿಲ್ಲ ಮತ್ತು ಸಹಿ ಹಾಕಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ವಿರುದ್ಧ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಪತ್ರದಲ್ಲಿ ಕೋರಿರುವ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ**.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**)**

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**